ವಾರದ ಪತ್ರ

## ಪೊಲೀಸ್ ಮತ್ತು ಸರಿಗಮಪ!

ಪೊಲೀಸ್ ಮುಖ್ಯಪೇದೆಯೊಬ್ಬರು ಸರಿಗಮಪ ಕಾರ್ಯಕ್ರಮದಲ್ಲಿ ಭಾಗವಹಿಸಿರುವುದು ಶ್ಲಾಘನೀಯ. ಅವರಿಗೆ ಆ ಕಾರ್ಯಕ್ರಮದಲ್ಲಿ ಭಾಗವಹಿಸಲು ಅನುಮತಿ ನೀಡಿದ ಬೆಂಗಳೂರು ಪೊಲೀಸ್ ಆಯುಕ್ತರಾದ ಭಾಸ್ಕರ್ ರಾವ್ ಅವರ ಸಂಗೀತ ಪ್ರೇಮ ಮೆಚ್ಚುವಂತಹುದೇ!

ಆದರೆ, ಪೊಲೀಸ್ ಪೇದೆಯು ಸಂಗೀತ ಕಾರ್ಯಕ್ರಮದಲ್ಲಿ ಸಮವಸ್ತ್ರ ಧರಿಸಿ ಭಾಗವಹಿಸಿರುವುದು ಕರ್ನಾಟಕ ಪೊಲೀಸ್ ಅಧಿನಿಯಮದ ಅನ್ವಯ ನೀತಿ ಸಂಹಿತೆಯ ಸ್ಪಷ್ಟ ಉಲ್ಲಂಘನೆಯೇ ಸರಿ. ಅವರು ಕರ್ತವ್ಯ ನಿರ್ವಹಿಸುವ ಸಂದರ್ಭವನ್ನು ಹೊರತುಪಡಿಸಿ ಬೇರೆ ಸಮಯದಲ್ಲಿ ಸಮವಸ್ತ್ರ ಧರಿಸುವಂತಿಲ್ಲ! ಸಮವಸ್ತ್ರ ಧರಿಸಿದ ನಂತರ ಪೊಲೀಸರಂತೆಯೇ ವರ್ತಿಸಬೇಕು. ತಮ್ಮ ಕಾರ್ಯವ್ಯಾಪ್ತಿಯನ್ನು ಬಿಟ್ಟು ಬೇರೆಡೆ ತೆರಳುವಾಗ ಸಮವಸ್ತ್ರ ಧರಿಸುವಂತಿಲ್ಲ. ಸಮವಸ್ತ್ರ ಧರಿಸಿರುವಾಗ ಶಿಸ್ತಿನಿಂದ ವರ್ತಿಸಬೇಕು. ತಮ್ಮ ಉನ್ನತಾಧಿಕಾರಿಗಳಿಗೆ ಹಾಗೂ ನ್ಯಾಯಾಧೀಶರಿಗೆ ಸೆಲ್ಯೂಟ್ ಸಲ್ಲಿಸಬೇಕೇ ಹೊರತು ಬೇರಾರಿಗೂ ಸಲಾಂ ಹೊಡೆಯುವಂತಿಲ್ಲ. ಸರಿಗಮಪ ಕಾರ್ಯಕ್ರಮದಲ್ಲಿ ಭಾಗವಹಿಸಿದ ಈ ಪೊಲೀಸ್ ಮುಖ್ಯಪೇದೆ ಹಾಡು ಮುಗಿದ ನಂತರ ವೇದಿಕೆಯಲ್ಲಿ ಸಮವಸ್ತ್ರದಲ್ಲಿಯೇ ತೀರ್ಪುಗಾರರಿಗೆ ಉದ್ದಂಡ ನಮಸ್ಕಾರ ಹಾಕಿದ್ದು ನೀತಿಸಂಹಿತೆಯ ಉಲ್ಲಂಘನೆ!

—ಪಿ.ಜೆ. ರಾಘವೇಂದ್ರ, ಮೈಸೂರು

## ನೆನಪಾದ ಮೇರಾ ನಾಮ್ ಜೋಕರ್

ಕಾಮಿಡಿಗೂ ಕಣ್ಣೀರಿಗೂ ಬಿಡಿಸಲಾಗದ ಸಂಬಂಧ ಎನ್ನುತ್ತಲೇ ಮುಗಿದ ಝೀ ಕನ್ನಡದ 'ಕಾಮಿಡಿ ಕಿಲಾಡಿಗಳು' ಅಂತಿಮ ಅಧ್ಯಾಯ ಮನ ಕಲಕುವಂತೆ ಇತ್ತು.

ಕಣ್ಣೀರು ಹಾಕುತ್ತಲೇ ಎಲ್ಲರ ಕಾಲೆಳೆದ ಕಿಲಾಡಿಗಳ ಅಭಿನಯವಂತೂ ರಾಜ್ ಕಪೂರ್‌ರ 'ಮೇರಾ ನಾಮ್ ಜೋಕರ್' ಅನ್ನು ಹೆಜ್ಜೆ ಹೆಜ್ಜೆಗೂ ನೆನಪಿಸಿತು. ಹೊಸ ಹಳೆ ಕಲಾವಿದರು, ಸಭಿಕರು, ತೀರ್ಪುಗಾರರು ಹಾಗೂ ನೋಡುಗರ ಕಣ್ಣಂಚನ್ನು ತೇವಗೊಳಿಸಿತು. ಚಾರ್ಲಿ ಚಾಪ್ಲಿನರ 'ನನ್ನ ಕಣ್ಣೀರು, ನೋವುಗಳು ಬೇರೆಯವರ ಮನಕ್ಕೆ ಆನಂದ ತಂದರೂ ಅಡ್ಡಿಯಿಲ್ಲ; ಆದರೆ ಬೇರೆಯವರ ನೋವು ಕಣ್ಣೀರುಗಳು ನಮಗೆ ಆನಂದ ತರುವ ವಸ್ತುವಾಗಬಾರದು' ಎಂಬ ಹೇಳಿಕೆಯನ್ನು ಗಮನದಲ್ಲಿಟ್ಟುಕೊಂಡು ಮುಂದಿನ ಕಾಮಿಡಿಗಳು ಬರಲಿ ಎಂದು ಹಾರೈಸುತ್ತೇನೆ.

—ವಾ. ಮುರಳೀಧರ, ತೀರ್ಥಹಳ್ಳಿ

## ಪೆದ್ದುತನಕ್ಕೂ ಒಂದು ಮಿತಿಯಿದೆ

ಕಲರ್ಸ್ ಕನ್ನಡದ 'ನನ್ನರಸಿ ರಾಧೆ'ಯಲ್ಲಿ ಯಾವುದೋ ಒಂದು ಕಾರಣಕ್ಕೆ ಪ್ರತಿಷ್ಠಿತ ಕಂಪನಿಯಲ್ಲಿ ನಾಯಕಿಗೆ ಕೆಲಸ ಸಿಗುತ್ತದೆ. ಒಳ್ಳೆಯ ಸಂಬಳ ಜೊತೆಗೆ ಕಂಪನಿಯ ಒಡೆಯನ ಬೆಂಬಲವೂ ಇದೆ. ಅವಳಿಗೆ ಕಂಪನಿಯ ಒಡೆಯ ಮೊದಲ ಬಾರಿಗೆ ಒಂದು 'ಪ್ರೆಸೆಂಟೇಶನ್' ನೀಡುವ ಅವಕಾಶ ಮಾಡಿಕೊಡುತ್ತಾರೆ. ಅಲ್ಲದೆ ಅವಳಿಗೆ ಸಹಾಯ ಮಾಡಲು ಒಬ್ಬರಿಗೆ ಸೂಚಿಸುತ್ತಾರೆ. ಮೊದಲೇ ಆಕೆ ಪೆದ್ದು. ಸಹಾಯಮಾಡುವ ವ್ಯಕ್ತಿಗೆ ರಾತ್ರಿ 10 ಗಂಟೆಯಿಂದ ಬೆಳಗಿನ 6 ಗಂಟೆವರೆಗೆ ಆಗಾಗ ಫೋನ್ ಮಾಡುತ್ತಾ ಅವನ ನಿದ್ದೆಗೆ ಭಂಗ ತರುತ್ತಾಳೆ. ಸಮಯದ ಪರಿವೆಯೇ ಇಲ್ಲದೆ, ಹಾಸ್ಯಕ್ಕೂ ಮಿತಿ ಬೇಡವೇ?

—ಎನ್.ಎಸ್. ಚಂದ್ರಶೇಖರ್, ಬೆಂಗಳೂರು

## ಸಾಧಕರ ಅಭಾವವೇ?

ದೂರದರ್ಶನ ಚಂದನದ 'ಶುಭೋದಯ' ವಿವಿಧ ಕ್ಷೇತ್ರಗಳಲ್ಲಿ ಸಾಧನೆ ಮಾಡಿರುವವರನ್ನು ಒಂದೂವರೆ ತಾಸು ನೇರಪ್ರಸಾರ ಕಾರ್ಯಕ್ರಮದಲ್ಲಿ ಪ್ರಸಾರ ಮಾಡುತ್ತಿತ್ತು. ಕಳೆದ ಕೆಲವು ತಿಂಗಳುಗಳಿಂದ ಕಾರ್ಯಕ್ರಮದ ಅವಧಿ ಒಂದು ಗಂಟೆಗೆ ಇಳಿಸಲಾಯಿತು. ಇತ್ತೀಚೆಗೆ, ಶುಭೋದಯ ಕಾರ್ಯಕ್ರಮದಲ್ಲಿ, ವಾರದಲ್ಲಿ ನಾಲ್ಕು ದಿನಗಳ ಕಾಲ ಈಗಾಲೇ ಪ್ರಸಾರವಾದ ಕಾರ್ಯಕ್ರಮಗಳೇ, ಮರುಪ್ರಸಾರ ಗೊಳ್ಳುತ್ತಿರುವುದು, ಕೆಲವೊಮ್ಮೆ ಮೂರು ನಾಲ್ಕು ಬಾರಿಯೂ ಪ್ರಸಾರ ಮಾಡುತ್ತಿರುವುದು, ಚಂದನ ವಾಹಿನಿಗೆ ಸಾಧಕರ ಅಭಾವ ಕಾಡುತ್ತಿದೆಯೇ ಎಂಬ ಅನುಮಾನ ಹುಟ್ಟಿಸಿದೆ. ಎಲೆಮರೆಯಕಾಯಿಯಂತೆ ಇರುವ ಸಾಧಕರಿಗೆ ಬರವಿಲ್ಲ.

—ಶಿವಮೊಗ್ಗ ರಮೇಶ್, ಮೈಸೂರು

## ಇದೆಂಥಾ ದುಃಸ್ಥಿತಿ?

ಕನ್ನಡ ಕಲರ್ ಸೂಪರ್‌ನ 'ಪಾಪ ಪಾಂಡು'ವಿನ ಪ್ರಮುಖ ಪಾತ್ರಧಾರಿಗಳು ಒಬ್ಬೊಬ್ಬರಾಗಿ ಕಳಚಿಕೊಳ್ಳಲು ಪ್ರಾರಂಭಿಸಿದ ನಂತರ, ಹೊಸ ಸರಕು ಸಿಗದೆ ಹಳೆಯ ಕಂತುಗಳಿಗೇ ಚಾನಲ್ ಜೋತುಬಿದ್ದಂತೆ ಕಾಣಿಸುತ್ತದೆ. ಅವುಗಳನ್ನೇ ಮತ್ತೆ ಮತ್ತೆ ಮರು ಪ್ರಸಾರ ಮಾಡುತ್ತಿರುವುದು ವೀಕ್ಷಕರಿಗೆ ದೊಡ್ಡ ತಲೆನೋವಾಗಿ ಪರಿಣಮಿಸಿದೆ.

—ಸಿಹಿಮೊಗೆ ರಮೇಶ್, ಮೈಸೂರು

## ವೈಭವೀಕರಣ ಸಾಕು

ಹಲವು ಧಾರಾವಾಹಿಗಳಲ್ಲಿ ಜ್ಯೋತಿಷ್ಯ, ಪೂಜೆ– ಪುನಸ್ಕಾರ, ಮೂಢನಂಬಿಕೆ ದೃಶ್ಯಗಳನ್ನು ಅನಗತ್ಯವಾಗಿ ತುರುಕಿ ಅದನ್ನೇ ವೈಭವೀಕರಿಸುತ್ತ ಮುಗ್ಧಅಮಾಯಕ ಮನಸ್ಸುಗಳನ್ನು ವಿಕಾಸದತ್ತ ಕೊಂಡೊಯ್ಯುವ ಬದಲು ವಿಕಾರದತ್ತ ಎಳೆಯುತ್ತಿರುವುದು ವಿಷಾದದ ಸಂಗತಿ.

ಭಾರತೀಯರಾದ ನಮ್ಮೆಲ್ಲರ ಜೀವನದಲ್ಲಿ ಭಕ್ತಿ, ಪೂಜೆ–ಪುನಸ್ಕಾರ ಹಾಸು ಹೊಕ್ಕಾಗಿ ಬಂದಿರುವ ವಿಷಯ. ಇದನ್ನೇನು ಅಲ್ಲಗಳೆಯುವಂತಿಲ್ಲ. ಆದರೆ ಅದಕ್ಕೂ ಒಂದು ಇತಿಮಿತಿ ಇದೆ. ಪ್ರಾಯಶಃ ಈ ಇತಿಮಿತಿಗಳ ಗೆರೆ ಯಾವ ಧಾರಾವಾಹಿ ನಿರ್ದೇಶಕರಿಗೂ ಗೋಚರಿಸಿದಂತಿಲ್ಲ. ಅದರ ವೈಫಲ್ಯದ ಪರಿಣಾಮ ಪೂಜೆ, ಪುನಸ್ಕಾರಗಳೆಲ್ಲ ವ್ಯವಹಾರದಂತೆ ಆಗಿದೆ. ಇನ್ನು ಮುಂದಾದರೂ ಇಂತಹ ಅಪ್ರಸ್ತುತ ವಿಚಾರ ಕೈ ಬಿಟ್ಟು ಭದ್ರ ಸಮಾಜ ಕಟ್ಟುವ ನಿಟ್ಟಿನತ್ತ ಪ್ರಯತ್ನ ಮಾಡಲಿ.

—ಅರವಿಂದ ಜಿ. ಜೋಷಿ, ಮೈಸೂರು

## ಮಗಳು ಕೋರ್ಟಿಗೆ ಬರಲಿ

ಕಲರ್ಸ್ ಸೂಪರ್‌ನ 'ಮಗಳು ಜಾನಕಿ' ಈ ಮೊದಲು ಚೆನ್ನಾಗಿ ಮೂಡಿಬರುತ್ತಿತ್ತು. ಈಗ ಯಾಕೋ ಕಳಪೆ ಎಂದು ಅನ್ನಿಸುತ್ತಿದೆ. ಕಥೆ ದಿಕ್ಕು ತಪ್ಪಿ ಎತ್ತಲೋ ಸಾಗುತ್ತಾ ಇದೆ. ಜಾನಕಿ ಹಾಗೂ ನಿರಂಜನ ಫ್ಯಾಕ್ಟರಿಗಾಗಿ ಸಾಲ ತೆಗೆದುಕೊಂಡ ಬಗ್ಗೆ ಬ್ಯಾಂಕಿನಲ್ಲಿ ಕಾಗದಪತ್ರಗಳು ಸರಿಯಾಗಿಲ್ಲ. ಇಬ್ಬರೂ ಭೀತಿಗೊಂಡಿದ್ದಾರೆ ಎನ್ನುವಂತೆ ಕಾಣಿಸುತ್ತದೆ. ಮನೆಯಲ್ಲಿ ಎಲ್ಲರಿಗೂ ಅಸಮಾಧಾನ ಇದೆ. ಇದನ್ನು ನೋಡಲು ಇಷ್ಟವಾಗುವುದಿಲ್ಲ. ಕೋರ್ಟಿನ ಸನ್ನಿವೇಶ ನೋಡಲು ಆಸೆ ಪಡುವಂತಾಗಿದೆ. ಈ ಕಥೆಯನ್ನು ಕೋರ್ಟಿನತ್ತ ಸಾಗಿಸುವುದು ಉತ್ತಮ.

—ಬ.ಸೊ. ಮುಳ್ಳೂರ ಹಲಗತ್ತಿ

## ಹೆಣ್ಣನ್ನು ಗೌರವಿಸಿ

ಚಂದನ ವಾಹಿನಿ ಬಿಟ್ಟರೆ ಬಿಟ್ಟರೆ ಬಹುತೇಕ ವಾಹಿನಿಗಳಲ್ಲಿ ಅಪಹಾಸ್ಯ ಎದ್ದುಕಾಣಿಸುತ್ತದೆ. ಸರಿಗಮಪ ಹಾಡಿನ ವೇದಿಕೆಯಿಂದ ಹಿಡಿದು ಮಜಾಭಾರತ, ಕಾಮಿಡಿ ಕಿಲಾಡಿಗಳು ಹಾಗೂ ಕೆಲವು ಧಾರಾವಾಹಿಗಳಲ್ಲಿ ಹಾಸ್ಯದ ನೆಪದಲ್ಲಿ ದ್ವಂದ್ವಾರ್ಥ ಇಣುಕುತ್ತದೆ. ಸ್ತ್ರೀಯನ್ನು ವಿಲನ್ ಆಗಿ ತೋರಿಸುವುದು ದ್ವೇಷಿಸುವುದು, ಅತ್ತೆ–ಸೊಸೆ ಜಗಳ, ವಿಷ ಹಾಕುವುದು, ಕೆಲವು ವೃತ್ತಿಗಳಿಗೆ ಅಪಮಾನ ಮಾಡುವುದು...

ಹೆಣ್ಣನ್ನು ಕ್ರೂರವಾಗಿ ಬಿಂಬಿಸಬೇಡಿ, ಬೈಗುಳಗಳಿಗೆ ಬಳಸುವುದು, ಹೀಯಾಳಿಸುವುದು, ಅವಳಿಗೂ ಹೃದಯವಂತಿಕೆ ಇದೆ. ಧಾರಾವಾಹಿಗಳನ್ನು ನೋಡಿದರೆ ಒಡೆದ ಕುಟುಂಬ ಒಂದಾಗುವಂತೆ ರೂಪಿಸಬೇಕು.

—ಎಂ.ಎಸ್. ಉಷಾ ಪ್ರಕಾಶ್, ಮೈಸೂರು